**ಸಾಕ್ಷಿಗೆ ದಿನಾಂಕ 19-4-2017 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ 2ನೇ ಎದುರುದಾರರ ಪರಃ ಶ್ರೀ. ಎಂಕೆ.ಸಿ.ವಕೀಲರಿಂದಃ** *

7. ನಿ.ಆರ್.3 ಎಂದು ಗುರುತಿಸಿದ ದಾಖಲೆಯಂತೆ, ಅದರಲ್ಲಿ ಕಾಣುವ ವ್ಯಕ್ತಿಗೆ ಎಲ್ಎಂವಿ ವಾಹನ ಚಲಾಯಿಸುವ ಡಿಎಲ್ ಇರುವುದೆಂದರೆ ಸರಿ. 2ನೇ ಎದುರುದಾರನಿಗೆ ಗೇರ್ ಸಹಿತ ಮೋಟಾರ್ ಬೈಕ್ ಚಲಾಯಿಸುವ ಡಿಎಲ್ ಇದ್ದರೂ ಕೂಡ, ಅದನ್ನು ನಾನು ಉದ್ದೇಶ ಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲವೆಂದರೆ ಸರಿಯಲ್ಲ.

8. ಅಪಘಾತವಾಯಿತೆಂದು ಹೇಳಿದ ದಿನ ಬೈಕ್ ಸವಾರ ಅಂದರೆ 2ನೇ ಎದುರುದಾರ ಮತ್ತು ಅರ್ಜಿದಾರರು ಗಾಯಗೊಂಡು ಚಿಕಿತ್ಸೆ ಕುರಿತು ಮಾತೃಶ್ರೀ ಆಸ್ಪತ್ರೆಗೆ ದಾಖಲಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದ ಕಾರಣ ಫಿರ್ಯಾದಿ ಕೊಡಲು ವಿಳಂಬವಾಗಿರುವುದೆಂದು ಸೂಚಿಸಲಾಗಿ, ಅವರು ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲವೆಂದು, ಆದರೆ ಫಿರ್ಯಾದಿನ್ನು ವಿಳಂಬವಾಗಿ ನೀಡಿರುವರೆಂದು ಸಾಕ್ಷಿ ಹೇಳುತ್ತಾರೆ. ನಾನು, ನನ್ನ ಮುಖ್ಯ ವಿಚಾರಣೆಯ ಖಂಡಿಕೆ 3 ರಲ್ಲಿ ಕಾಣಿಸಿದ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಎಂಎಲ್ಸಿ ಯಾದಿಯಲ್ಲಿ ಅರ್ಜಿದಾರ ಜಗದೀಶ್ ಇವರು ಬೈಕ್ ಸವಾರನು ಇದ್ದರೂ ಕೂಡ, ಹಿಂಬದಿ ಸವಾರನೆಂದು ಸುಳ್ಳಾಗಿ ಸೇರಿಸಲಾಗಿದೆ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಅಂಶದ ಮುಖ್ಯ ವಿಚಾರಣೆ ಸಲ್ಲಿಸಿ, ನಾನು ಸುಳ್ಳು ಸಾಕ್ಷಿ ಕೊಡುತ್ತಿರುವೆನೆಂದರೆ

ಸರಿಯಲ್ಲ. ಅರ್ಜಿಯ 2ನೇ ಎದುರುದಾರನು ಬೈಕ್‌ನ ಮಾಲೀಕ ಮತ್ತು ಸವಾರನು ಇದ್ದು ಆತನಿಗೆ ಬೈಕ್ ಚಲಾಯಿಸುವ ಸೂಕ್ತ ಡಿಎಲ್ ಇದ್ದರೂ ಕೂಡ, ನಾವು ಆ ಡಿಎಲ್‌ನ್ನು ತೆಗೆದುಕೊಳ್ಳಲು ಪ್ರಯತ್ನಿಸದೇ, ಆತನಿಗೆ ಡಿಎಲ್ ಇರುವುದಿಲ್ಲವೆಂದು ಹೇಳುತ್ತಾ, ಅರ್ಜಿದಾರನಿಗೆ ಪರಿಹಾರ ಕೊಡುವ ಬಾದ್ಯತೆಯಿಂದ ನುಣುಚಿಕೊಳ್ಳಲು ಸುಳ್ಳು ಹೇಳುತ್ತಿರುವೆನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)

(ಓ. ಹೇ. ಕೇ. ಸ.ಇ)

3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.